ನೋಡುತ್ತಿದ್ದಳು. ಅವಳ ಕೈಕಾಲು ಕಪ್ಪಗಿತ್ತು. ‘ನಿನ್ನ ಹೆಸರೇನು?’ ಕೇಳಿದ. ‘ಚೆಂಗುಟ್ಟಿ; ತನ್ನಪ್ಪ ಚಾಂಬನ್, ತಾಯಿಯ ಹೆಸರು ಕರ್ಪಳು’ ಅಂದಳು. ‘ತನ್ನನ್ನೂ ನಿಮ್ಮೆಲ್ಲಾ ಕೆಲಸದಲ್ಲಿ ಸೇರಿಸಿಕೊಳ್ಳಿ’ ಅಂತ ಅವನು ಹೇಳಿದ್ದಕ್ಕೆ ಅವಳ ಮುಖದಲ್ಲಿ ಸಮ್ಮತಿಯ ಮಂದಸ್ಮಿತ ಅರಳಿ ತಲೆಯಾಡಿಸಿದಳು. ಒಂದು ಸೌಹಾರ್ದ ಮೂಡಿದ್ದಕ್ಕೆ ಮಾತಿಗೆ ಮೊದಲಿಟ್ಟರು. ಅವರದು ಕೊಡಂಗಲ್ಲೂರು ಭಗವತಿಗೆ ನಡೆದುಕೊಳ್ಳುವ ಕೇರಳದ ಒಂದು ಅಲೆಮಾರಿ ಬುಡಕಟ್ಟು. ಈಗ ಹೆಚ್ಚು ಕುಟುಂಬಗಳಿಲ್ಲ. ಇದ್ದವರು ಎಲ್ಲೆಲ್ಲೊ ಅಲೆಯುತ್ತಿರುತ್ತಾರೆ. ರಕ್ತಸಂಬಂಧಿಗಳ ಜಗಳವೊಂದು ವಯನಾಡಿಂದ ಈ ಕುಟುಂಬವನ್ನು ದೈವದ ಆಣೆ ಪ್ರಮಾಣ ಮಾಡಿಸಿ ಹೊರದೂಡಿತ್ತು. ಬಂಡಿಪುರ ಅರಣ್ಯದಲ್ಲಿ ಗುಡಿಸಲು ಕೆಲಕಾಲ ಹಾಕಿದ್ದರಂತೆ. ಅಲ್ಲಿ ಫಾರೆಸ್ಟ್ ಇಲಾಖೆಯವರು ಹೊರಗೆ ಹಾಕಿದ್ದರು. ಕಾಡೊಳಗೇ ಸುತ್ತುತ್ತ, ವಸತಿಹೂಡುತ್ತ, ಒಕ್ಕಲೆಬ್ಬಿಸಿಕೊಳ್ಳುತ್ತ ಅದೇ ಬದುಕಾಗಿಹೋಗಿತ್ತು. ರಾಜ್ಯ ಜಿಲ್ಲೆಗಳ ಮೇರೆ ಅವರಿಗಿರಲಿಲ್ಲ. ಯಾಣ, ಮತ್ತಿಘಟ್ಟಗಳ ಅರಣ್ಯಗಳಲ್ಲಿ ಹಾದು ಯೆಚಡಿ ಕಾಡಲ್ಲಿ ವಾಸವಾಗಿದ್ದರು. ಫಾರೆಸ್ಟಿನವರು ಎಲ್ಲೂ ಬಹಳ ದಿನಗಳ ಕಾಲ ಇರಗೊಡುವುದಿಲ್ಲ. ಹಿಂಸೆ, ಮೈಕೈ ಮುಟ್ಟಬರುವ ಸಂದರ್ಭಗಳೂ ಇಲ್ಲದಿಲ್ಲ. ಇಲ್ಲಿ ಬಂದು ವರ್ಷವಾಗಿತ್ತು. ‘ಭಗವತಿ ದಯೆ, ಯಾಕೋ ಫಾರೆಸ್ಟಿನವರು ಅಷ್ಟಾಗಿ ಇತ್ತ ಬರುವುದಿಲ್ಲ’ ಅಂತ ಹೇಳಿದಳು. ‘ಇಲ್ಲಿ ಹತ್ತಿರದ ಹಳ್ಳಿಗಳಲ್ಲಿ ಕೂಲಿ ಮಾಡಿದರೆ ಆರಾಮಾಗಿ ದಿನ ದೂಡಬಹುದಲ್ಲ. ಈಗ ಕೂಲಿಗಳಿಗೆ ಬೇಡಿಕೆಯಿದೆ’ ಅಂದದ್ದಕ್ಕೆ ಅವರ ಕುಲಕಟ್ಟಳೆಯಂತೆ ಬೇರೆಯವರ ಕೆಳಗೆ ದಾಸ್ಯ ಮಾಡುವಂತಿಲ್ಲ. ಸ್ವಂತ ಗಳಿಸಬಹುದು ಅಂದಳು. ಯೆಚಡಿ ವರೆಗೂ ಎಷ್ಟೋ ಮೈಲುಗಳ ಬರಿ ಕಾಡು. ಅಲ್ಲಿ ಇಲ್ಲಿ ನಾಕಾರು ಮನೆಗಳಿರುವ ಹಳ್ಳಿಗಳು ಕೆಲವಿವೆ. ಊರ ಸುತ್ತಮುತ್ತ ಹಳ್ಳಿಯವರದೇ ಮಾಲ್ಕಿ ಗದ್ದೆ ಬೆಟ್ಟ ಅಂತಿರುವುದಕ್ಕೆ ಅಲ್ಲಿ ಇವರಿಗೆ ಗುಡಿಸಲು ಹಾಕಿಕೊಳ್ಳಲು ಬಿಡುವುದಿಲ್ಲ. ಸರಕಾರಿ ಜಾಗದಲ್ಲಿ ಇವರು ಬೆಳೆ ಬೆಳೆದುಕೊಳ್ಳಲು ಸರಕಾರ ಬಿಡುವುದಿಲ್ಲ. ‘ಮತ್ತೆ, ನೀವು ಜೀವನಕ್ಕೇನು ಮಾಡತೀರ?’ ಅಂತ ಅಚ್ಚರಿಯಿಂದ ಕೇಳಿದ. ಬೆರಗು ಸುರಿಸುತ್ತ ಸುತ್ತೆಲ್ಲ ಕೈಯಾಡಿಸಿದಳು. ತಿನ್ನಲು ಬರುವ ಸೊಪ್ಪು, ಬೇರು, ಕಾಯಿ, ಗೆಡ್ಡೆ, ಚಿಗುರು... ಯಾವ ಕಾಲದಲ್ಲಿ ಯಾವ ಕಾಯಿ, ಹಣ್ಣು. ಹಳ್ಳ ಹೊಳೆಗಳಲ್ಲಿ ಮೀನು. ಬಿಳಿಯಿಲಿ, ಮುಳ್ಳಿಲಿ, ಕಾಡುಕೋಳಿ, ಚಿಟ್ಟುಕೋಳಿ. ಕಾಡೆಲ್ಲ ಆಹಾರದಿಂದ ಕೊತಗುಟ್ಟುತ್ತಿರುವ ಅನುಭವವಾಯಿತು ವಿವರಣೆಯಲ್ಲಿ. ಅಗೆದಲ್ಲಿ ಒಂದಾದರು ಬೇರು, ಗೆಡ್ಡೆ ಉಳಿಸುತ್ತಾರೆ. ಕಾಡುಕೋಳಿ ನೆಲದಮೇಲೆ ಪೊದರಲ್ಲಿ ಮೊಟ್ಟೆಯಿಡುತ್ತದೆ. ಆರೇಳು ಮೊಟ್ಟೆಯಲ್ಲಿ ನಾಕನ್ನೆ ತೆಗೆದುಕೊಳ್ಳಬೇಕು. ತಾಯಿಕೋಳಿ ಅತ್ತು ಕಾಡು ಬಂಜೆಯಾಗಬಾರದು. ಬಳ್ಳಿ ಎಲೆ ಚಿಗುರು ಎಲ್ಲಾ ಹಾಗೆ; ಮತ್ತೆ ಬೆಳಿಯೋ ಚೈತನ್ಯ ನಾಶವಾಗಬಾರದು. ಮಾತಾಡುತ್ತ ಹೊತ್ತೇರಿತ್ತು. ಅವಳು ಮೊದಲೆದ್ದಳು. ಹಿಂಬಾಲಿಸಿದ. ಊಟವಾಯಿತು.

ಚೆಂಗುಟ್ಟಿ ಬಿದಿರಿನ ಕೆಲಸದಲ್ಲಿದ್ದಳು. ಯಜಮಾನ ಎಲ್ಲೋ ಹೋದವ ಮುಸ್ಸಂಜೆಗೆ ಬಂದ. ಅವಳು ಬಿದಿರಿಂದ ಸಿಗಿದ ತೆಳ್ಳನೆ ಪಟ್ಟಿಗಳಲ್ಲಿ ಪೆಟ್ಟಗೆಯಂತಹದನ್ನು ಹೆಣೆದಿದ್ದಳು. ನಾಕೈದು ಕಿಲೋಮೀಟರು ಪಾಸಲೆಯಲ್ಲಿ ಎರಡು ಹಳ್ಳಿಗಳಲ್ಲಿ ಇದನ್ನ ತಗೊಂಡು ಅಕ್ಕಿ ಮೆಣಸು ಹಳೆಬಟ್ಟೆ ಕೊಡತಾರಂತೆ. ಸಂಜೆ ಹಳ್ಳದಲ್ಲಿ ಸ್ನಾನಕ್ಕಿಳಿದ. ಸೋಪಿಲ್ಲ, ಶಾಂಪೂ ಇಲ್ಲ; ಎದ್ದು ಒಳವಸ್ತ್ರ ಹಿಂಡಿ ಹಾಕಿದ. ಊಟವಾದರೆ ಮತ್ತದೆ ನಕ್ಷತ್ರ ವೀಕ್ಷಣೆ. ಅದರಲ್ಲಿ ಏನೋ ವಿಶೇಷ ಅನಿಸುತ್ತಿತ್ತು. ಅಲ್ಲಲ್ಲಿ ಗೊಂಚಲಾಗಿದ್ದಲ್ಲಿ ರಾಶಿಗಳನ್ನು ಗುರುತಿಸಲು ನೋಡಿದ; ಜ್ಞಾನ ಸಾಲದು ಅನಿಸಿತು. ಪುನರಾವರ್ತನೆಯಾದರೂ ಬೇಸರವಿಲ್ಲದ ಏನೋ ಸಂತೋಷ. ಕೆಲವೆ ಕಾಲದಲ್ಲಿ ಲೆಕ್ಕ ತಪ್ಪಿತು. ಎಷ್ಟುದಿನವಾಯಿತು ಇವತ್ತಿಗೆ – ದಿನ, ವಾರ ಲೆಕ್ಕ ಹಾಕಲು ಅಸಮರ್ಥನಾದ.

ಚೆಂಗುಟ್ಟಿ ಬುಟ್ಟಿ ಕೊಡಲು ಹಳ್ಳಿಗೆ ಹೋದವಳು ಇಳಿಹೊತ್ತಿನಲ್ಲಿ ವಾಪಸು ಬಂದಿದ್ದಳು.